ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 46

ರೇವು ಮತ್ತು ಜಲಸಾರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,00,11,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,50 ,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 22

ಅರಣ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 117,78,81,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 28,00,000ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಉಪಾಧ್ಯಕ್ಷರು :- ನಿಮ್ಮ ಪ್ರಶ್ನೆ 361 (2042) ಇದಿನಬ್ಬನವರೇ, ಸಮಾಜ ಕಲ್ಯಾಣ ಮಂತ್ರಿಗಳು ಇಲ್ಲ. ಆಮೇಲೆ ಅವರು ಏನಾದರೂ ಬಂದರೆ ತೆಗೆದುಕೊಳ್ಳಬಹುದು. ಎಜುಕೇಷನ್ ಮಿನಿಸ್ಟರ್ ಬಂದರೆ ತೆಗೆದುಕೊಳ್ಳೋಣ.

ಶ್ರೀ ಎಂ. ವಿ. ಪೆಂಕಟಪ್ಪನವರೇ ತಮ್ಮ ಪ್ರಶ್ನೆಗಳು, ಎಜುಕೇಷನ್ ಮಿನಿಸ್ಟರ್‌ರವರು ಆನ್ಸರ್ ಮಾಡುತ್ತಾರೆ, ಈಗ ಬರುತ್ತಾರೆ, ಕೊನೆಯಲ್ಲಿ ತೆಗೆದುಕೊಳ್ಳುತ್ತೇನೆ. ಕೊಶ್ಚನ್ ಎಲ್ಲಾ ಮುಗಿಸಿ ನಂತರ ನಿಮ್ಮನ್ನು ಕರೆಯುತ್ತೇನೆ.

ವಿಷಯ: ರಾಜ್ಯದಲ್ಲಿನ ಬೆಂಕಿ ಕಡ್ಡಿ ಕಾರ್ಖಾನೆಗಳು

Starred L.A.Quesion No. 370 (2023)

Sri K.Harshakumra Gowda (Chamaraj) Will the Minister of State for Samll Scale Industries he pleased to state.

a) No. of Match Box Industries in the State ?

b) What is the amount of production of Match box by these Industries ?

c) Which are all lthe neighbouring State that are experting Match boxes to out State ? From these States, what is the amount of Match Boxes imported to out State ?

Sri Nazeer Ahemed (Minister of State for Small Scale Industries.)

a) There are 32 Match Box Indtustries in the State.

b) Rs, 108.15 lakhs amount of Match boxes are produced per year by the above 32 Industries.

c) Information is not available with the Commerce & Industries

Department.

2.45 ಪಿ.ಎಂ

ಶ್ರೀ ಕೆ. ಹರ್ಷಕುಮಾರ ಗೌಡ :- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಕರ್ನಾಟಕದಲ್ಲಿ ಬೆಂಕಿ ಕಡ್ಡಿ ತಯಾರು ಮಾಡತಕ್ಕಂಥ ಕಾರ್ಖಾನೆಗಳ ಸಂಖ್ಯೆ ಎಷ್ಟಿದೆ ಎಂದು ಕೇಳಿದ್ದೆ. ಉತ್ತರದಲ್ಲಿ 32 ಉದ್ಯಮಗಳು ಅಂತ ಹೇಳಿದ್ದಾರೆ. ಅದರ ಒಟ್ಟು ವಾರ್ಷಿಕ ಆದಾಯ ವಹಿವಾಟು ಒಂದು ಕೋಟಿ 8 ಲಕ್ಷ ಚಿಲ್ಲರೆ ಎಂದು ಕೂಡ ಹೇಳಿದ್ದಾರೆ. ಕಡೆಯದಾಗಿ ಹೊರರಾಜ್ಯದಿಂದ ನಮ್ಮ ರಾಜ್ಯಕ್ಕೆ ಆಮದು ಎಷ್ಟು ಮಾಡಿ ಕೊಳ್ಳಲಾಗುತ್ತಿದೆ, ಮತ್ತು ನಮ್ಮ ರಾಜ್ಯದಿಂದ ಹೊರರಾಜ್ಯಕ್ಕೆ ಎಷ್ಟು ಪ್ರಮಾಣದಲ್ಲಿ ಬೆಂಕಿ ಕಡ್ಡಿಗಳನ್ನು ರಫ್ತು ಮಾಡುತ್ತೀರಿ; ಎಂದು ನಾನು ಪ್ರಶ್ನೆ ಕೇಳಿದೆ ,ಅದಕ್ಕೆ ಉತ್ತರವನ್ನು ಕೊಡುವುದಕ್ಕಾಗಿಲ್ಲ. ಉತ್ತರ ಸಿಕ್ಕಿಲ್ಲ, ಇದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಬರುತ್ತದೆ ಎಂದು ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ನಮ್ಮ ಉದ್ದೇಶ ಇಡೀ ರಾಜ್ಯದಲ್ಲಿ ಯಾವ ತಾಯಂದಿರು ಅವರು ಪ್ರತಿನಿತ್ಯ ಹಚ್ಚುವ ಬೆಂಕಿ ಪೆಟ್ಟಿಗೆ ಯಾವ ಗ್ರಾಮಾಂತರ ಪ್ರದೇಶದ ಜನತೆಯ ಒಂದು ಉದ್ಯಮವಾದಬೇಕಾಗಿತ್ತೋ ಇದರಿಂದ ಅವರು ವಂಚಿತರಾಗಿಲ್ಲವೇ ? ಮತ್ತೆ ಹೊರರಾಜ್ಯದಿಂದ ನಮ್ಮ ಅರಾಜ್ಯಕ್ಕೆ ಎಷ್ಟು ಪ್ರಮಾಣದಲ್ಲಿ ಈ ಒಂದು ಬೆಂಕಿಪೆಟ್ಟಿಗೆ ಬರುತ್ತದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಈ ಕೈಗಾರಿಕೆ ಸ್ಥಾಪನೆಯಾಗಬೇಕಾಗಿತ್ತು. ನಮ್ಮ ರಾಜ್ಯದ ಯುವಕರಿಗೆ ಉದ್ಯೋದಗ ಸಿಗಬೇಕಾಗಿತ್ತು. ಅವರು ಇದರಿಂದ ವಂಚಿತರಾಗಿಲ್ಲವೇ ?

ಶ್ರೀ ನಜೀರ್ ಅಹಮದ್ (ಸಣ್ಣ ಕೈಗಾರಿಕಾ ಸಚಿವರು):- ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಆದರೆ ನಮ್ಮ ರಾಜ್ಯಕ್ಕೆ ಹೊರರಾಜ್ಯದಿಂದ ಬರತಕ್ಕಂಥ ಬೆಂಕಿ ಕಡ್ಡಿ ಅದರ ಒಂದು ಲೆಕ್ಕಾಚಾರ ನಮ್ಮಲ್ಲಿ ಇರುವುದಿಲ್ಲ. ಅದು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿರುತ್ತದೆ. ಆದ್ದರಿಂದ ಆ ಲೆಕ್ಕಾಚಾರವನ್ನು ನಾವು ನಮ್ಮ ಇಲಾಖೆಯಿಂದ ಕೊಡಲಿಕ್ಕೆ ಆಗಲಿಲ್ಲ. ಮತ್ತು ವಿಶ್ವ ಯೋಜನೆಯಲ್ಲಿ ಭಾರಿ ದೊಡ್ಡ ಪ್ರಮಾಣದಲ್ಲಿ ಈಗಾಗಲೇ ಬೆಂಕಿ ಕಡ್ಡಿ ಉತ್ಪಾದನೆ ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೇನೆ. ಇನ್ನು 6 ತಿಂಗಳಲ್ಲಿ ನಾವು ನಮ್ಮ ರಾಜ್ಯದಲ್ಲಿರತಕ್ಕಂಥ ಡಿಮ್ಯಾಂಡ್ ಎಷ್ಟು ಇದೆ ಅದಕ್ಕೆ ಸರಿಯಾಗಿ ಉತ್ಪತ್ತಿ ಮಾಡವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಹರ್ಷಕುಮಾರ ಗೌಡ:- ಬಹಳ ಸಂತೋಷ, ವಿಶ್ವ ಯೋಜನೆಯ ಅಡಿಯಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಹೊಸದಾಗಿ ಉದ್ಯೋಗವನ್ನು ಸೃಷ್ಟಿ ಮಾಡುತ್ತೇವೆಂದು ಹೇಳಿದ್ದಾರೆ ಸಂತೋಷದ ವಿಷಯ. ನಾನು ಪ್ರಶ್ನೆ ಕೇಳಿದ ಉದ್ದೇಶ ಇಷ್ಟೇ. ತಮಿಳುನಾಡು ರಾಜ್ಯ ನಮ್ಮ ಅರಣ್ಯ ಕಡ್ಡಿಗಳನ್ನು ಮರವನ್ನು ಉಪಯೋಗಿಸಿಕೊಂಡು ಆಮದು ಮಾಡಿಕೊಂಡು ಅದಕ್ಕೆ ಮತಾಪು ಹಚ್ಚಿ ಇಡೀ ರಾಷ್ಟ್ರವನ್ನೆ ಈ ಉದ್ಯಮ ಒಡಿದಿದೆ. ತಮಿಳುನಾಡು ಅಸ್ಸಾಂ ಗುಜರಾತಿನ ಜೀಬ್ರುಗಳ ತನಕ ಸಪ್ಲೈ ಮಾಡತಕ್ಕಂಥ ಹಾದಿಯಲ್ಲಿ ಶಕ್ತಿ ಪಡೆದಿದೆ. ಅವರು ಕೈಗಾರಿಕೆಯನ್ನು ಮಾಡಿಕೊಂಡು ಆಮೂಲಕ ವಾಣಿಜ್ಯ ಮತ್ತು ವ್ಯಾಪಾರ ಹಿಡಿದು ಹಣ ಸಂಪಾದನೆ ಮಾಡುತ್ತಿದ್ದಾರೆ. ಈ ಒಂದು ಉದ್ದೇಶದಿಂದ ನಮ್ಮ ವಿಶ್ವ ಕಾರ್ಯಕ್ರಮವೂ ಕೂಡ ಯಶಸ್ವಿಯಾಗಬೇಕಾದರೆ ಈ ಉದ್ಯಮವನ್ನು ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪನೆ ಮಾಡಿದರೆ ಆಗ ಯುವಕರಿಗೆ ಕೆಲಸ ಕೊಡುವುದರ ಜೊತೆಗೆ ಹೊರರಾಜ್ಯ ಪಡೆದುಕೊಂಡಿರುವ ಏಕಸ್ವಾಮ್ಯವನ್ನು ತಡೆಯಲು ಸಾಧ್ಯವಾಗುವುದಿಲ್ಲವೇ ? ಇದನ್ನು ತಡೆಯದೆ ಹೋದರೆ ನಮ್ಮ 'ವಿಶ್ವ' ಯೋಜನೆಗೆ ಇದು ಕುಂಠಿತವಾಗುವುದಿಲ್ಲವೇ?

ಶ್ರೀ ನಜೀರ್ ಅಹಮದ್ :- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಈಗ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದು ಸೂಕ್ತವಾದ ಸಲಹೆ ನಾನು ಪರಿಶೀಲನೆ ಮಾಡುತ್ತೇನೆ.